1447(1222) ಶ್ರೀ ಲಾಲಾಜಿ ಆರ್. ಮೆಂಡನ್(ಕಾಪು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸರ್ಕಾರ ನಿಗದಿಪಡಿಸಲಾದ ಕರ್ತವ್ಯದ ಅವಧಿ ಎಷ್ಟು?

ಆ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸರ್ಕಾರ ನಿಗದಿಪಡಿಸಲಾದ ವೇತನವೆಷ್ಟು?

ಇ) ವೇತನಬಡ್ತಿಯನ್ನು ವಾರ್ಷಿಕವಾಗಿ ಪರಿವರ್ತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಸರ್ಕಾರ ನಿಗದಿಪಡಿಸಲಾದ ಕೆಲಸಕ್ಕೆ ತಕ್ಕಂತೆ ವೇತನ ನೀಡಲು ಸರ್ಕಾರ ಕ್ರಮ ಜರುಗಿಸುವುದೇ?

ಉ) ಸದರಿಯವರಿಗೆ ಸರ್ಕಾರ ನಿವೃತ್ತಿ ವಯಸ್ಸನ್ನು ನಿಗದಿಪಡಿಸಿ ನಿರಂತರ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ಉಪದಾನ ನೀಡುವ ಉದ್ದೇಶವಿದೆಯೇ?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಅ) ಪ್ರತಿ ದಿನ ಐದು ಗಂಟೆಗಳ ಅವಧಿ ನಿಗದಿ ಪಡಿಸಲಾಗಿದೆ.

ಆ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪರಿಶೀಲನೆಯಲ್ಲಿರುವುದಿಲ್ಲ.

ಈ) ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ನೀಡುತ್ತಿಲ್ಲ. ಅವರು ಗೌರವ ಸೇವೆ ಸಲ್ಲಿಸುತ್ತಿರುವುದರಿಂದ ಗೌರವಧನ ನೀಡಲಾಗುತ್ತಿದೆ.

ಉ) ಇಲ್ಲ.

1448(1780) ಶ್ರೀ ಮಾಧುಸ್ವಾಮಿ ಜೆ.ಸಿ.(ಚಿಕ್ಕನಾಯಕನಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಪ್ರೈ.ಲಿ. ಕಂಪನಿಯೋ ಅಥವಾ ಪಬ್ಲಿಕ್ ಲಿಮಿಟೆಡ್ ಕಂಪನಿಯೋ?

ಆ) ಈ ಕಂಪೆನಿಯು ರಿಜಿಸ್ಟ್ರಾರ್ ಆಫ್ ಕಂಪನೀಸ್ ರವರಲ್ಲಿ ರಿಜಿಸ್ಟರ್ ಮಾಡಿದೆಯೆ?

ಇ) ರಿಜಿಸ್ಟಾರ್ ಆದ ಸಂಖ್ಯೆ, ಸದಸ್ಯರುಗಳ ಹೆಸರು ಮುಂತಾದ ವಿವರ ಒದಗಿಸುವುದು:

ಈ) ಈ ಕಾರ್ಖಾನೆಯ ಕೆಲಸ ಪ್ರಾರಂಭಿಸುವಾಗ ರೈತರಿಂದ ಶೇರು ಬಂಡವಾಳ ಸಂಗ್ರಹಿಸಲಾಗಿದೆಯೇ:

ಉ) ಬೀದರ ಕಿಸಾನ್ ಸಕ್ಕರೆ ಕಾರ್ಖಾನೆ ಲಿಮಿಟೆಡ್ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಯಾರು?

ಊ) ಈ ಕಾರ್ಖಾನೆಯು ಬೀದರ್ ಡಿಸಿಸಿ. ಬ್ಯಾಂಕಿನಿಂದ ಸಾಲ ಪಡೆದಿರುತ್ತದೆಯೆ?

ಋ) ಪಡೆದಿದ್ದರೆ ಯಾವ ತರಹದ ಸಾಲ ಮತ್ತು ಸಾಲದ ಮೊತ್ತವೆಷ್ಟು?

ಋೂ) ಸಾಲ ಪಡೆಯುವಾಗ ಈ ಕಾರ್ಖಾನೆ ಬೀದರ್ ಡಿ.ಸಿ.ಸಿ. ಬ್ಯಾಂಕಿನ ಸದಸ್ಯತ್ವ ಹೊಂದಿತ್ತೇ ಹಾಗೂ ಸಾಲದ ಮಂಜೂರಾತಿಯು ಬ್ಯಾಂಕಿನ ನಿಯಮಾವಳಿ ಪ್ರಕಾರ ಮಾಡಲಾಗಿದೆಯೇ: